ಉಪಯೋಗದಲ್ಲಿದ್ದ 'ಉಪಾಧ್ಯಾಯ' ಎಂಬ ಸಂಸ್ಕೃತ ಶಬ್ದಕ್ಕೆ ಪ್ರತಿಯಾಗಿ 'ನಾಡೋಜ' ಎಂದರೆ, ನಾಡಿನ ಗುರು ಎಂಬರ್ಥದಲ್ಲಿ ಹೊಸ ಪದವನ್ನು ಸೃಷ್ಟಿಸಿ ಸಮರ್ಥವಾಗಿ ಬಳಸಿದ. ಇಷ್ಟಿದ್ದರೂ ತನ್ನನ್ನು 'ಕವಿತಾ ಗುಣಾರ್ಣವ' ಎಂದು ಕರೆದುಕೊಳ್ಳುವುದರಲ್ಲಿ ಪಂಪನಿಗೆ ವಿಶೇಷ ಒಲವು.

ಕುಮಾರವ್ಯಾಸನಂತಹ ಮಹಾಕವಿಯೂ ಸೇರಿದಂತೆ ಹಳಗನ್ನಡ ಮತ್ತು ನಡುಗನ್ನಡ ಕವಿಗಳಿಗೆ ತಮ್ಮ ಬಗ್ಗೆ ಏನಾದರೂ ಹೇಳಿಕೊಳ್ಳುವುದಕ್ಕೆ ಸಂಕೋಚ ಮತ್ತು ಅಳುಕು. ತಾವು ಬರೆದ್ದನ್ನು ಓದುಗರಿಗೆ ಅರ್ಪಿಸಿ ನಿಶ್ಚಿಂತವಾಗಿರುವುದು ಅವರ ಸಾಮಾನ್ಯ ಗುಣ. ಜನರೂ ಅಷ್ಟೇ. ಕವಿ ಬರೆದದ್ದನ್ನು ತಮಗೆ ಬೇಕಾದಂತೆ ಮರು ರಚಿಸಿಕೊಂಡು ಗಮಕ, ಹರಿಕಥೆ, ಯಕ್ಷಗಾನ ಇತ್ಯಾದಿಗಳ ಮೂಲಕ ಇತರರಿಗೆ ತಿಳಿಸಿಹೇಳುತ್ತಿದ್ದರು. ಆದರೆ, ಪಂಪ ಮಾತ್ರ ಇದಕ್ಕೊಂದು ಅಪವಾದ. ಆತ ತನ್ನ ಬಗ್ಗೆ ಸಾಕಷ್ಟು ಹೇಳಿಕೊಂಡಿದ್ದಾನೆ. ಅವನ ತಂದೆ ಭೀಮಪ್ಪಯ್ಯ, ತಾಯಿ ಅಬ್ಬಲಬ್ಬೆ. ಹುಟ್ಟಿದ್ದು ಕ್ರಿಸ್ತಶಕ 902ರಲ್ಲಿ. ಅವನ ಅಜ್ಜ ವೇದವೇದಾಂಗ ಪಾರಂಗತನಾದ ಕೊಮರಯ್ಯ. ಇವರೆಲ್ಲರೂ ವಾಸಿಸುತ್ತಿದ್ದುದು ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಣ ಪ್ರದೇಶವಾದ ವೆಂಗಿಮಂಡಲದಲ್ಲಿ. ಇಂದು ಈ ಪ್ರದೇಶವು ಪಕ್ಕದ ತೆಲಂಗಾಣ ರಾಜ್ಯಕ್ಕೆ ಸೇರಿದೆಯಾದರೂ ಪಂಪನ ಕಾಲಕ್ಕೆ ಅದು ಕನ್ನಡ ನಾಡೇ ಆಗಿತ್ತು, ಏಕೆಂದರೆ ಆಗಣ ಕನ್ನಡನಾಡು 'ಕಾವೇರಿಯಿಂದಂ ಗೋದಾವರಿವರೆಗೆ' ಹರಡಿತ್ತಲ್ಲ! ಕಾರಣಾಂತರದಿಂದ ಪಂಪನ ತಂದೆ ಕೊಮರಯ್ಯ ಬನವಾಸಿ ಕಡೆಗೆ ವಲಸೆ ಬಂದರು. ಕೊಮರಯ್ಯನ ಮಗ ಅಂದರೆ ಪಂಪನ ತಂದೆ ಭೀಮಪ್ಪಯ್ಯ ಯಜ್ಞಯಾಗಾದಿಗಳಲ್ಲಿನ ಹಿಂಸೆಯನ್ನು ವಿರೋಧಿಸಿ ಜೈನ ಮತವನ್ನು ಸ್ವೀಕರಿಸಿದ್ದ. ಪಂಪ ಓದಿದ್ದು ಪ್ರಸಿದ್ಧ ಜೈನ ಕೇಂದ್ರವಾದ ಶ್ರವಣಬೆಳಗೊಳದಲ್ಲಿ. ಸಕಲ ಶಾಸ್ತ್ರ ಪರಿಣಿತರಾದ ದೇವೇಂದ್ರಮುನಿಗಳು ಪಂಪನ ಗುರುಗಳು. ಸಂಸ್ಕೃತ, ಗಣಿತ, ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ, ಶಿಲ್ಪ, ವೈದ್ಯ, ವೇದಶಾಸ್ತ್ರಗಳನ್ನೆಲ್ಲಾ ಕಲಿತ ಪಂಪನು ಮುಂದೆ ಈ ಜ್ಞಾನವನ್ನು ತನ್ನೆರಡೂ ಕಾವ್ಯಗಳಲ್ಲಿ ಯಥೇಚ್ಛವಾಗಿ ಬಳಸಿಕೊಂಡಿದ್ದಾನೆ.



'ತನ್ನ ಹಿರಿಯರು ವೈದಿಕರಾದರೂ ತಾನೇಕೆ ಜೈನನಾದೆ?' ಎಂದು ಪಂಪ ಯೋಚಿಸದೇ ಉಳಿದವನಲ್ಲ. ಅವನ ಪ್ರಕಾರ 'ಹಿರಿಯರು ಯಜ್ಞಕ್ಕೆ ಮಾಡಿದ ಪಶುಗಳ ಆಹುತಿಯಿಂದ ಅವರ ಧವಳಕೀರ್ತಿ ಕರಿದಾಯಿತಂತೆ!' ಈ ಮತ ಪರಿವರ್ತನೆಯಿಂದ ಪಂಪನಿಗೆ ವೈದಿಕ ಪರಂಪರೆಯ ಬಗೆಗೂ ಜೈನಮತದ ಬಗ್ಗೆಯೂ ಆಳವಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಇದರಿಂದ ಕನ್ನಡಕ್ಕಾದ ಲಾಭ ಅಷ್ಟಿಷ್ಟಲ್ಲ.

ಪಂಪನು ತನ್ನ ಬಗ್ಗೆ ಮತ್ತು ತನ್ನ ಎರಡು ಕಾವ್ಯಗಳ ಬಗ್ಗೆ ಹೇಳಿಕೊಂಡ ರೀತಿಯೂ ಬಹಳ ಮೋಹಕವಾಗಿದೆ. ಕೆಳಗಿನ ಪದ್ಯದಲ್ಲಿ ಆತ ನಾನು ಹೇಗಿದ್ದೆ ಎಂಬುದನ್ನು ಸೊಗಸಾಗಿ ಹೇಳಿಕೊಂಡಿದ್ದಾನೆ

'ಕದಳೀ ಗರ್ಭಶ್ಯಾಮಂ
ಮೃದು ಕುಟಿಲ ಶಿರೋರುಹಂ ಸರೋರುಹವದನಂ